

ಇದಕ್ಕೆ ಕಾರಣಳಾದ ಆ ಮಹಿಳೆಯನ್ನು ರಾಜಸಭೆಗೆ ಕರೆಸಿ ಸನ್ಮಾನ ಮಾಡಲಾಯಿತು. ಈ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡಿದೆ ಎಂದು ರಾಜ ಕೇಳಿದ. ಮಹಿಳೆ, 'ಇದಕ್ಕೆ ಉತ್ತರ ನೀಡಲಾರೆ ಪ್ರಭು, ದಯವಿಟ್ಟು ಕೇಳಬೇಡಿ. ಸಮಸ್ಯೆಗೆ ಪರಿಹಾರ ಬೇಕಿತ್ತು, ಅದು ಸಿಕ್ಕಿದೆ' ಎಂದಳು. ಅವಳ ಮಾತಿಗೆ ಬೆಲೆ ಕೊಟ್ಟು ರಾಜನು ಕಾರಣ ಕೇಳಲಿಲ್ಲ. ಇಲ್ಲಿಗೆ ಕತೆ ಮುಗಿಯಿತು.

ಪತ್ರ ರಹಸ್ಯ ಹೀಗಿತ್ತು: ಕುಂತಲ ರಾಜನು ಯಾವ ಪತ್ರವನ್ನೂ ಆ ಮಹಿಳೆಗೆ ನೀಡಿರಲಿಲ್ಲ. ತಾನೇ ಒಂದು ಪತ್ರವನ್ನು ಬರೆದುಕೊಂಡು ಹೋಗಿದ್ದಳು. ಅದರಲ್ಲಿ, 'ಮಾನ್ಯ ಚಂದ್ರವರ್ಮರಿಗೆ, ನಮ್ಮ ಗಡಿ ಸಮಸ್ಯೆಗಿಂತಲೂ ದೊಡ್ಡ ಸಮಸ್ಯೆ ಎದುರಾಗಿದೆ. ನಮ್ಮಂತಹ ಚಿಕ್ಕ ರಾಜ್ಯಗಳ ಮೇಲೆ ಪರದೇಶಿಯರ ಆಕ್ರಮಣ ಆಗುತ್ತದೆಯೆಂಬ ಸುದ್ದಿ ನಮ್ಮ ಗೂಢಚಾರರಿಂದ ತಿಳಿದುಬಂದಿದೆ. ಅವರು ಗಡಿಗಳಿಂದ ಒಳನುಸುಳಲು ಸಂಚು ರೂಪಿಸಿದ್ದಾರೆ. ಆದ್ದರಿಂದ ನೀವು ನಿಮ್ಮ ಗಡಿಗಳಲ್ಲಿ ಭದ್ರತೆಯನ್ನು ಹೆಚ್ಚಿಸಿಕೊಳ್ಳಿ. ಅದಕ್ಕೂ ಒಂದು ಸಲಹೆ ನೀಡುತ್ತೇನೆ. ಭೂ ಗಡಿಯನ್ನು ಕಾವಲು ಕಾಯುವುದು ಕಷ್ಟ. ಅದರ ಬದಲು ನಿಮ್ಮ ರಾಜ್ಯದ ಸುತ್ತಲೂ ಕಾಲುವೆ ತೋಡಿ ನೀರು ಬಿಟ್ಟು, ಅದರಲ್ಲಿ ಮೊಸಳೆಗಳನ್ನು ಬಿಡಿ. ನಾವೂ ಹಾಗೆಯೇ ಮಾಡುತ್ತೇವೆ. ನಮ್ಮ ಜಗಳದಲ್ಲಿ ಮೂರನೆಯವರಿಗೆ ಲಾಭ ಆಗಬಾರದು. ನೀವು ಸ್ತ್ರೀಯರನ್ನು ಗೌರವಿಸುವಿರೆಂದು ಕೇಳಿದ್ದೇನೆ. ಆದ್ದರಿಂದ ಈ ಮಹಿಳೆಯ ಕೈಯಿಂದ ಕಳಿಸಿದ ಸಂದೇಶವನ್ನು ನಂಬುತ್ತೀರೆಂದು ಭಾವಿಸುವೆ' ಎಂದು ಬರೆಯಲಾಗಿತ್ತು.

ಇದನ್ನು ಓದಿದ ಚಂದ್ರವರ್ಮನಿಗೆ ಪಶ್ಚಾತ್ತಾಪವಾಯಿತು. 'ನಿಮ್ಮ ರಾಜ್ಯಕ್ಕೆ ನೀರು ಬಿಡುತ್ತೇನೆ, ನೀರು ಭರಿಸಲು ರಾಜ್ಯದ ಸುತ್ತಲೂ ಕಾಲುವೆ ತೋಡಿ' ಎಂದು ಮರು ಪತ್ರ ಬರೆದ. ಆ ಪತ್ರವನ್ನೇ ಮಹಿಳೆ ಕುಂತಲ ರಾಜನಿಗೆ ಕೊಟ್ಟಿದ್ದಳು. ಅವನೂ ಕಾಲುವೆ ತೋಡಿಸಿದ; ನೀರಿನ ಸಮಸ್ಯೆ ನೀಗಿತು. ಗಡಿ ಸಮಸ್ಯೆಯೂ ಪರಿಹಾರವಾಯಿತು.